ಶ್ರೀ ಆರ್. ಎಲ್. ಜಾಲಪ್ಪ.—ಚಿತ್ರದುರ್ಗದಿಂದ ಫೈರ್ ಬ್ರಿಗೇಡ್‌ನವರು ಹೋಗಬೇಕು. ಪ್ರತಿಯೊಂದು ತಾಲ್ಲೂಕಿನಲ್ಲೂ ಫೈರ್ ಬ್ರಿಗೇಡ್‌ನವರು ಇರಬೇಕೆಂದರೆ ಎಕ್ಸ್‌ಪೆಂಡೀಚರ್ ಜಾಸ್ತಿಯಾಗುತ್ತದೆ ಅದು ಆಗುವುದಿಲ್ಲ. ಕಾಲ್ ಬಂದ ತಕ್ಷಣ ಹೋಗಿ ಅಟೆಂಡ್ ಮಾಡಲಿಕ್ಕೆ ಇವರಿಗೆ ಸೂಚನೆ ಕೊಡುತ್ತೇನೆ.

12) ರಾಜ್ಯದಲ್ಲಿ ವಿಮಾನಿನ ಕ್ಷಾಮದ ಬಗ್ಗೆ

ಶ್ರೀ ಬಿ. ಎಂ. ಇದಿನಬ್ಬ.—ಕಳೆದ ಎರಡು ವಿಮಾನುಗಾರಿಕಾ ಋತುಮಾನಗಳಲ್ಲಿ ವಿಮಾನಿನ ಸಂಗ್ರಹ ಗಣನೀಯವಾಗಿ ಕಡಿಮೆಯಾಗಿದೆ. ಕಳೆದ ಎರಡು ವರ್ಷಗಳಲ್ಲೂ ವಿಮಾನಿನ ಕ್ಷಾಮ ಒದಗಿದೆ. ಆದರೂ ಸರ್ಕಾರ ಈ ವರ್ಷವನ್ನು ವಿಮಾನಿನ ಕ್ಷಾಮದ ವರ್ಷಗಳೆಂದು ಘೋಷಣೆ ಮಾಡಲೇ ಇಲ್ಲ. ಕೃಷಿಯಲ್ಲಿ ಒಂದು ಬೆಳೆ ನಷ್ಟವಾದರೆ ಇತರ ಎರಡೂ ಬೆಳೆಗಳನ್ನು ಬರ ಪರಿಹಾರ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವಂತೆ ಕಾಯಿದೆ ಇದೆ. ಅದೇ ರೀತಿ ವಿಮಾನು ಕ್ಷಾಮದಲ್ಲಿಯೂ ಕಾಯಿದೆ ತಂದು ವಿಮಾನುಗಾರರಿಗೆ ಉಪಕಾರ ಮಾಡಬೇಕು. ವಿಮಾನು ಕ್ಷಾಮದ ಬಗ್ಗೆ ಘೋಷಣೆಯನ್ನು ಸರ್ಕಾರ ಮಾಡಬೇಕು. ಈ ಕುರಿತು ವಿಮಾನುಗಾರಿಕಾ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಊರಿನಲ್ಲಿ ಇಲ್ಲ. ವರದಿಯನ್ನು ತರಿಸಿಕೊಡುತ್ತೇನೆ.

13) ಪುತ್ತೂರು ತಾಲ್ಲೂಕಿನಲ್ಲಿ ರೈತರಿಗೆ ಸ್ವಂತ ಉಪಯೋಗಕ್ಕಾಗಿ ಭತ್ತವನ್ನು ಹಲ್ ಮಾಡುವಾಗ ತೊಂದರೆಯಾಗಿರುವುದು.

ಶ್ರೀ ವಿನಯಕುಮಾರ್ ಸೊರ್ಕೆ.—ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನಲ್ಲಿ ತನ್ನ ಸ್ವಂತ ಉಪಯೋಗಕ್ಕೋಸ್ಕರ ಹಲ್ಲರ್ ಉಪಯೋಗ ಮಾಡುವ ರೈತರಿಗೆ ಲೆವಿ ಹಾಕುವ ಬಗ್ಗೆ ತುಂಬಾ ತೊಂದರೆಯಾಗಿದೆ. ಈ ವರ್ಷಕ್ಕೆ ಹೊಂದಿಕೊಂಡು ನೋಡಿದರೆ ಮಳೆ ಸಮಯಕ್ಕೆ ಸರಿಯಾಗಿ ಬಾರದೇ, ಒಂದನೆಯ ಭತ್ತದ ಬೆಳೆಯೂ ಸಮಯಕ್ಕೆ ಸರಿಯಾಗಿ ನಾಟಿಯಾಗದೇ, ಬಿಟ್ಟು ಹಾಗೂ ಮಜಲು ಗದ್ದೆಗಳ ಬೇಸಾಯ ಮಾಡದೇ ಉಳಿದಿರುವುದರಿಂದ ರೈತರಿಗೆ ತುಂಬಾ ಕಷ್ಟನಷ್ಟ ಉಂಟಾಗಿದೆ. ಹಲ್ಲರ್ ನಡೆಸಲು ಲೈಸನ್ಸ್ ಕೊಡದೇ ಇದ್ದು ಲೆವಿ ಹಾಕುವಾಗ ಸ್ವಂತ ಬಳಕೆಗೋಸ್ಕರ ಹಲ್ಲರ್ ಹಾಕಿದವರಿಗೂ ಲೆವಿಹಾಕಲು ಸಾಧ್ಯವಾಗುವುದಿಲ್ಲ ಎಂದು ತಮ್ಮ ಕಷ್ಟವನ್ನು ತೋಡಿಕೊಂಡಾಗ ರೈತರ ಮೇಲೆ ಲೈಸೆನ್ಸ್ ಇಲ್ಲದೇ ತಮ್ಮ ಸ್ವಂತಕ್ಕೋಸ್ಕರ ಹಲ್ಲರ್ ನಡೆಸುವುದು ತಪ್ಪು ಎಂದು ಕಾನೂನು ಪ್ರಕಾರ ಕೇಸು ದಾಖಲು ಮಾಡುವುದಾಗಿ ಉತ್ತರ ಬರುತ್ತದೆ. ಇದರಿಂದ ರೈತರಿಗೆ ಕಷ್ಟನಷ್ಟಗಳು ಸಂಭವಿಸುತ್ತದೆ. ಆದುದರಿಂದ, ತನ್ನ ಸ್ವಂತ ಬಳಕೆಗೋಸ್ಕರ ಹಲ್ಲರ್‌ನ್ನು ಯಾವ ರೈತರು ಉಪಯೋಗ ಮಾಡುತ್ತಾರೆ, ಅಂತಹ ರೈತರಿಗೆ ಈ ವರ್ಷಕ್ಕೆ ಹೊಂದಿಕೊಂಡು ಲೆವಿಯನ್ನು ವನ್ನಾ ಮಾಡಬೇಕಾಗಿ ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪಿಸಿರತಕ್ಕ ವಿಚಾರವನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಉತ್ತರವನ್ನು ಕಳುಹಿಸಿಕೊಡುವಂತೆ ತಿಳಿಸುತ್ತೇನೆ.

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠಕ್ಕೆ ಆಗಮಿಸಿದರು.)

14) ದಾವಣಗೆರೆಯಲ್ಲಿ ನಾಲ್ಕು ನೂಲಿನ ಗಿರಣಿಗಳು ಮುಚ್ಚಿರುವುದರಿಂದ ಕಾರ್ಮಿಕರು ಕಂಗಾಲಾಗಿರುವುದು.

ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ದಾವಣಗೆರೆಯಲ್ಲಿ ನಾಲ್ಕು ನೂಲಿನ ಗಿರಣಿಗಳು ಮುಚ್ಚಿ ಸುಮಾರು ೮ ತಿಂಗಳಾಯಿತು. ಆ ಕೈಗಾರಿಕೆಗಳಲ್ಲಿ ಸುಮಾರು

ಮೂರು ಸಾವಿರ ಕುಟುಂಬಗಳು ನಿರುದ್ಯೋಗದಲ್ಲಿ ಬಳಲುತ್ತಿದ್ದಾರೆ. ನಗರದಲ್ಲಿ ಅಶಾಂತಿ, ಅತೃಪ್ತಿ ಹೆಚ್ಚುತ್ತಿದೆ. ಈಗಾಗಲೇ ಕಾರ್ಮಿಕರು ತಮ್ಮ ಕೈಗಾರಿಕೆಗಳನ್ನು ಪ್ರಾರಂಭಿಸಬೇಕಾಗಿ ಸರ್ಕಾರದ ಗಮನ ಸೆಳೆಯಲು ೬ ದಿವಸಗಳಕಾಲ ಅನಿರ್ಧಿಷ್ಟ ಕಾಲದ ಉಪವಾಸ ಮಾಡಿದ ಫಲವಾಗಿ ನಮ್ಮ ರಾಜ್ಯದ ಮಂಖ್ಯಿ ಮಂತ್ರಿಗಳು ಉಪವಾಸ ನಿಲ್ಲಿಸಿ ಚರ್ಚೆಗೆ ಬರಬೇಕೆಂದು ಅಕ್ಟೋಬರ್ ೧೪, ೧೯೮೭ ರಂದು ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಅಧಿಕಾರಿಗಳ ಮತ್ತು ಸಂಬಂಧಪಟ್ಟ ಮಂತ್ರಿಗಳು, ಮಾಲೀಕರು, ಕಾರ್ಮಿಕ ಪ್ರತಿನಿಧಿಗಳೆಲ್ಲರನ್ನೂ ಒಳಗೊಂಡು ಸಭೆಯನ್ನು ಕರೆದು ಶೀಘ್ರವಾಗಿ ಮುಚ್ಚಿರುವ ಎಲ್ಲಾ ಗಿರಣಿಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳುವುದಾಗಿ ಭರವಸೆ ಕೊಟ್ಟರು. ಎರಡು ತಿಂಗಳು ಕಳೆದರೂ ಮುಚ್ಚಿರುವ ಮಿಲ್ಲುಗಳು ಪ್ರಾರಂಭವಾಗದೇ ಇರುವುದರಿಂದ ಡಿಸೆಂಬರ್ ೧೪, ೧೯೮೭ ರಂದು ಮಂತ್ರಿಯೊಂದು ಮೊದಲಿನಂತೆ ಸಭೆಯನ್ನು ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಕರೆದರು. ಆಗಲೂ ಕೂಡಲೆ ಮಿಲ್ಲುಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಹಿರಿಯ ಅಧಿಕಾರಿಗಳಿಗೆ ಆದೇಶವನ್ನು ಕೊಟ್ಟರುತ್ತಾರೆ. ಈಗ ಒಂದೂವರೆ ತಿಂಗಳಾದರೂ ಇನ್ನೂ ದಾವಣಗೆರೆಯಲ್ಲಿ ಮುಚ್ಚಿರುವ ಮಿಲ್ಲುಗಳು ಪ್ರಾರಂಭವಾಗಿಲ್ಲ. ಇದನ್ನು ಗಮನಿಸಿ ಸನ್ಮಾನ್ಯ ಮುಖ್ಯಮಂತ್ರಿಗಳು ಸನ್ಮಾನ್ಯ ಕೈಗಾರಿಕಾ ಮಂತ್ರಿಗಳು ಕಾರ್ಯಪ್ರವೃತ್ತರಾಗಿ ಮುಚ್ಚಿರುವ ಮಿಲ್ಲುಗಳನ್ನು ಪ್ರಾರಂಭಿಸಲು ದಿನಾಂಕವನ್ನು ಗೊತ್ತುಮಾಡಿ ಕಾರ್ಮಿಕರು ಆಶಾದಾಯಕವಾದ ಜೀವನ ಸಾಗಿಸಲು ಸಹಾಯ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಸಚಿವರು).—ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಸಚಿವರಿಗೆ ಈ ವಿಚಾರವನ್ನು ತಿಳಿಸಿ ಮಾನ್ಯ ಸದಸ್ಯರಿಗೆ ಉತ್ತರವನ್ನು ತರಿಸಿಕೊಡುತ್ತೇನೆ.

ಶ್ರೀ ಪಂಪಾಪತಿ.—ತಾವು ಏನು ಹೇಳುತ್ತಿದ್ದೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಸಂಬಂಧಪಟ್ಟ ಮಂತ್ರಿಗಳು ವಿಧಾನ ಪರಿಷತ್ತಿನಲ್ಲಿದ್ದಾರೆ. ತಾವು ಪ್ರಸ್ತಾಪ ಮಾಡಿರತಕ್ಕ ವಿಚಾರ ಸರ್ಕಾರಕ್ಕೆ ಗೊತ್ತಿದೆ, ಈ ಬಗ್ಗೆ ಸರ್ಕಾರದ ಪ್ರಯತ್ನವೂ ಕೂಡ ನಡೆದಿದೆ ಎನ್ನತಕ್ಕ ವಿಚಾರವನ್ನೂ ತಾವು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದೀರಿ. ನಾನು ಈ ವಿಚಾರವನ್ನು ಸಂಬಂಧಪಟ್ಟ ಸಚಿವರಿಗೆ ತಿಳಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ತಿಳಿಸುತ್ತೇನೆ.

15) ಕುಂದಾಪುರ ತಾಲ್ಲೂಕಿನಲ್ಲಿರುವ ರೂರಲ್ ಡಿಸ್ಪೆನ್ಸರಿಗಳಲ್ಲಿ ವೈದ್ಯರುಗಳಿಲ್ಲದಿರುವುದು,

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) ಮತ್ತು ಶ್ರೀ ಜಿ.ಎಸ್. ಆಚಾರ್ (ಬೈಂದೂರು).—ಮಾನ್ಯ ಅಧ್ಯಕ್ಷರೆ, ''ಕ್ರಿ.ಶ. ೨೦೦೦ದ ವೇಳೆಗೆ ಎಲ್ಲರಿಗೂ ಆರೋಗ್ಯ'' ಎಂಬ ರಾಷ್ಟ್ರೀಯ ಗುರಿ ಸಾಧನೆಗೆ ಬದ್ಧವಾದ ರಾಜ್ಯ ಸರ್ಕಾರ, ಇರುವ ಆಸ್ಪತ್ರೆಗಳನ್ನು ಮುಚ್ಚಲು ಕ್ರಮ ಕೈಗೊಂಡಿರುವುದು, ಯಾವ ಯಾವುದೋ ಆಸ್ಪತ್ರೆಗಳಿಗೆ ಯಾರುಯಾರನ್ನೋ ನೇಮಿಸುವುದು, ಎಷ್ಟೋ ವರ್ಷಗಳಿಂದ ವೈದ್ಯಾಧಿಕಾರಿಗಳು ಇಲ್ಲದಲ್ಲಿ ನೇಮಕ ಮಾಡದೇ ಇರುವುದು ಅತ್ಯಂತ ದುರದೃಷ್ಟಕರ, ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲೂಕಿನಲ್ಲಿ ಅಮಾನವೀಯವು, ಕಾಳಾವರ ಗ್ರಾಮದ ರೂರಲ್ ಡಿಸ್ಪೆನ್ಸರಿಗಳಲ್ಲಿ ಅಲ್ಲಿನ ವೈದ್ಯರ ಪ್ರಾಯ ವಿಸಾರಿದೆಯೆಂದು ನಿವೃತ್ತಗೊಳಿಸಲಾಯಿತು. ಆ ಆಯುರ್ವೇದ ಆಸ್ಪತ್ರೆಗಳಿಗೆ ಅಲೋಪತಿ ವೈದ್ಯರನ್ನು ನಿಯಮ ವಿರುದ್ಧವಾಗಿ ಇನ್‌ಛಾರ್ಜ್ ಆಗಿ ನೇಮಿಸಲಾಯಿತು. ಕೆಲವು ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನಾಗಿ ಬಡ್ತಿಗೊಳಿಸಲಾಯಿತು. ಇನ್ನೂ ಕೆಲವು ಘಟಕಗಳನ್ನು ಮುಚ್ಚಲು ಸರ್ಕಾರ ಜಿಲ್ಲಾ ಪರಿಷತ್ತಿಗೆ ಸೂಚಿಸಿದೆ. ಹಳ್ಳಿಹೊಳೆ, ಹಕ್ಲಾಡಿ, ಆಸ್ಪತ್ರೆಗಳಿಗೆ ಅನೇಕ ವರ್ಷಗಳಿಂದ ವೈದ್ಯರಿಲ್ಲ. ಮಹಿಳಾ ವೈದ್ಯರ ಸ್ಥಾನ ಕೆಲವೆಡೆ ಖಾಲಿ. ರೂ. ೨೫೦೦೦ ಸ್ಥಳೀಯ ದೇಣಿಗೆ ಕೊಟ್ಟವರಿಗೆ ಹೊಸ ಘಟಕ ಮಂಜೂರಾತಿ ಇಲ್ಲ. ಘಟಕಗಳನ್ನೇ ತೆರೆಯುವುದಿಲ್ಲ ಇನ್ನು ಮುಂದೆ—ಎಂಬ ಸೂಚನೆ ಬೇರೆ. ಕೆಲವು ಮಂಡಲಗಳಿಗೆ ಆಸ್ಪತ್ರೆಗಳೇ ಇಲ್ಲ. ಇರುವ ಆಸ್ಪತ್ರೆಗಳಿಗೆ ಮದ್ದಿನ ಸರಬರಾಜು ಸಮರ್ಪಕವಾಗಿಲ್ಲ. ೧೯೮೭–೮೮ರ ಪ್ರಥಮ ೯ ತಿಂಗಳಿಗೆ ೧/೩ ಅಂಶ ಮಾತ್ರ ಮದ್ದಿನ ಪೂರೈಕೆ. ಅದರಲ್ಲೂ ಕೆಲವು ಆಸ್ಪತ್ರೆಗಳಿಗೆ ಡಿಸ್ಟಿಲ್ಡ್ ವಾಟರ್ ಬಂದೇ ಇಲ್ಲ, ಗ್ಲೂಕೋಸೂ ಇಲ್ಲ, ಅವಶ್ಯಕ ಸಿಬ್ಬಂದಿಗಳ ನೇಮಕವೂ ಇಲ್ಲ. ಈ ಎಲ್ಲಾ ನ್ಯೂನತೆಗಳೂ ಸರಿಯಾಗುವುದೆಂದಿಗೆ ? ಕ್ರಿ. ಶ. ೧೯೮೮ ರಲ್ಲಿ ಆದೀತೇ ಎಂದು ಕೇಳಬಯಸುತ್ತೇನೆ.